ಮಧ್ಯಂತರ ಅರ್ಜಿ ಸಂಖ್ಯೆ-6 ರ ಮೇಲೆ ಆದೇಶ

ಅರ್ಜಿದಾರರು / ವಾದಿಯರು ಈ ಮಧ್ಯಂತರ ಅರ್ಜಿ ಸಂಖ್ಯೆ-6 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿ, ದಾವೆ ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೆ ದಾವಾ ಐಟಂ ನಂ.5 ರ ಸ್ವರೂಪ ಬದಲಾಯಿಸದಂತೆ ಮತ್ತು ಮಾರಾಟ ಮಾಡದಂತೆ ಉದ್ದೇಶಿತ 7 ನೇ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿರುತ್ತಾರೆ.

2. 1(ಸಿ)ವಾದಿ / ಅರ್ಜಿದಾರರು ಈ ಮಧ್ಯಂತರ ಅರ್ಜಿಯನ್ನು ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. 7 ನೇ ಉದ್ದೇಶಿತ ಎದುರುದಾರರಿಗೆ ಮಧ್ಯಂತರ ಅರ್ಜಿ ನಂ.5 ರ ನೋಟೀಸನ್ನು ಕಳುಹಿಸಲಾಗಿ, ಉದ್ದೇಶಿತ 7 ನೇ ಎದುರುದಾರರು ನ್ಯಾಯಾಲಯದ ಮುಂದೆ ಹಾಜರಾಗಿ, ತಮ್ಮ ಪರವಾಗಿ ವಕೀಲರನ್ನು ನೇಮಿಸಿಕೊಳ್ಳಲು ಮತ್ತು ತಕರಾರನ್ನು ಸಲ್ಲಿಸಲು ಕಾಲಾವಕಾಶ ನೀಡಬೇಕೆಂದು ಪ್ರಾರ್ಥಿಸಿಕೊಂಡಿದ್ದಾರೆ.

4. ವಾದಿ ಪರ ವಕೀಲರ ವಾದವನ್ನು ಆಲಿಸಲಾಯಿತು.

5. ವಾದಿಯು, 1 ರಿಂದ 3 ನೇ ಪ್ರತಿವಾದಿಯರ ವಿರುದ್ಧ ದಾವಾ ಸಲ್ಲಿಸಿ, ದಾವಾ ಆಸ್ತಿಗಳಲ್ಲಿ ¼ ಅಂಶ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸಬೇಕೆಂದು

ಹೊನ್ನಾಳಿಯ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವಾ ನಂ.192/2012 ನ್ನು ಸಲ್ಲಿಸಿದ್ದು, ಸದರಿ ದಾವೆ ಚಾಲ್ತಿಯಲ್ಲಿದ್ದಾಗ 1 ನೇ ಪ್ರತಿವಾದಿಯು ದಿಃ08/09/2017 ರಂದು ದಾವಾ ಐಟಂ ನಂ.5 ಕ್ಕೆ ಸಂಬಂಧಪಟ್ಟಂತೆ 4 ನೇ ಪ್ರತಿವಾದಿಗೆ ನೊಂದಾಯಿತ ದಾನಪತ್ರ ಬರೆದುಕೊಟ್ಟಿದ್ದಾರೆಂದು, 4 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗಿ ದಾವೆಗೆ ಅವಶ್ಯಕ ಪಕ್ಷಗಾರನೆಂದು ಸೇರ್ಪಡೆಯಾಗಿದ್ದು, ನಂತರ 4 ನೇ ಪ್ರತಿವಾದಿಯು ಮಧ್ಯಂತರ ಅರ್ಜಿ ನಂ.5 ರಲ್ಲಿ ನಮೂದಿಸಿದ ಉದ್ದೇಶಿತ 5 ನೇ ಪ್ರತಿವಾದಿಗೆ ದಾವಾ ಐಟಂ ನಂ.5 ನ್ನು ದಿಃ23/04/2021 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ. . ನಂತರ ಉದ್ದೇಶಿತ 5 ನೇ ಪ್ರತಿವಾದಿಯು ದಾವಾ ಐಟಂ ನಂ.5 ನ್ನು ಉದ್ದೇಶಿತ 6 ನೇ ಪ್ರತಿವಾದಿಗೆ ದಿಃ28/03/2022 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ. ನಂತರ ಉದ್ದೇಶಿತ 6 ನೇ ಪ್ರತಿವಾದಿಯು ದಿಃ21/03/2023 ರಂದು 7 ನೇ ಉದ್ದೇಶಿತ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ.

6. ವಾದಿ ಪರ ವಕೀಲರು ದಾವಾ ಐಟಂ ನಂ.5 ಕ್ಕೆ ಸಂಬಂಧಪಟ್ಟಂತೆ ಫೋಟೋಗಳನ್ನು, ಸಿ.ಡಿ. ಮತ್ತು ಪೊಲೀಸ್ ಹಿಂಬರಹಗಳನ್ನು ಹಾಜರುಪಡಿಸಿದ್ದಾರೆ. ವಾದಿಯರು ಸಲ್ಲಿಸಿದ ದಾವೆಯನ್ನು ಅವಲೋಕಿಸುವ ಅಧಿಕಾರ ವ್ಯಾಪ್ತಿ ಹೊನ್ನಾಳಿಯ ಹೆಚ್ಚುವರಿ ಸಿವಿಲ್ ನ್ಯಾಯಾಲಯಕ್ಕೆ ಇರುವುದಿಲ್ಲ ಎಂದು ವಾದಪತ್ರವನ್ನು ವಾದಿಯರಿಗೆ ಹಿಂದಿರುಗಿಸಿ, ಈ ನ್ಯಾಯಾಲಯದಲ್ಲಿ ದಾವಾ ದಾಖಲಿಸಲು ಮತ್ತು ವಾದಿ, ಪ್ರತಿವಾದಿಯರಿಗೆ ಹಾಜರಾಗಲು ನಿರ್ದೇಶಿಸಿದ್ದು, ಆ ಮೇರೆಗೆ 1 ನೇ ಪ್ರತಿವಾದಿ ವಕೀಲರ ಮೂಲಕ ಹಾಜರಾಗಿದ್ದಾರೆ. 3 ನೇ ಪ್ರತಿವಾದಿ ಏಕತರ್ಫಿ ಉಳಿದಿರುತ್ತಾರೆ. 2 ನೇ ಪ್ರತಿವಾದಿ ಮೃತರಾಗಿದ್ದು, ಉದ್ದೇಶಿತ 5 ಮತ್ತು 6 ನೇ

ಪ್ರತಿವಾದಿಯರ ಮಧ್ಯಂತರ ಅರ್ಜಿ ನಂ.5 ರಲ್ಲಿ ತೋರಿಸಿದ ವಿಳಾಸವನ್ನು ಪರಿಶೀಲಿಸಲಾಗಿ, ಉದ್ದೇಶಿತ 5 ನೇ ಪ್ರತಿವಾದಿ ಹೊನ್ನಾಳಿ ತಾಲ್ಲೂಕು, ಕೂಲಂಬಿ ಗ್ರಾಮದಲ್ಲಿ ವಾಸವಾಗಿದ್ದಾರೆ. ಉದ್ದೇಶಿತ 6 ನೇ ಪ್ರತಿವಾದಿ ಚಿತ್ರದುರ್ಗದಲ್ಲಿ ವಾಸವಾಗಿದ್ದಾರೆಂದು ನಮೂದಿಸಿದ್ದಾರೆ. ಮಧ್ಯಂತರ ಅರ್ಜಿ ನಂ.5 ರಲ್ಲಿ ತೋರಿಸಿದ ಉದ್ದೇಶಿತ 5 ಮತ್ತು 6 ನೇ ಪ್ರತಿವಾದಿಯರ ವಿರುದ್ಧ ವಾದಿಯು ಯಾವುದೇ ಪರಿಹಾರವನ್ನು ಕೇಳಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮಧ್ಯದಲ್ಲಿ 2012 ರಿಂದ ವ್ಯಾಜ್ಯಗಳು ಚಾಲ್ತಿಯಲ್ಲಿದ್ದು 1 ರಿಂದ 4 ನೇ ಪ್ರತಿವಾದಿಯರು ನ್ಯಾಯಾಲಯದಲ್ಲಿ ಹಾಜರಾಗಿದ್ದಾರೆ.

7. 1 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಿಃ08/09/2017 ರಂದು ನೊಂದಾಯಿತ ದಾನಪತ್ರವನ್ನು ಬರೆದುಕೊಟ್ಟಿದ್ದಾರೆ. 4 ನೇ ಪ್ರತಿವಾದಿಯು ದಾವಾ ಐಟಂ ನಂ.5 ಕ್ಕೆ ಸಂಬಂಧಪಟ್ಟಂತೆ 4 ನೇ ಪ್ರತಿವಾದಿಯು ಉದ್ದೇಶಿತ 5 ನೇ ಪ್ರತಿವಾದಿಗೆ ದಾವಾ ಐಟಂ ನಂ.5 ನ್ನು ದಿಃ23/04/2021 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ.. ಉದ್ದೇಶಿತ 5 ನೇ ಪ್ರತಿವಾದಿಯು ಉದ್ದೇಶಿತ 6 ನೇ ಪ್ರತಿವಾದಿಗೆ ದಿಃ28/03/2023 ರಂದು ದಾವಾ ಐಟಂ ನಂ.5 ನ್ನು ಮಾರಾಟ ಮಾಡಿದ್ದಾರೆ. ಉದ್ದೇಶಿತ 6 ನೇ ಪ್ರತಿವಾದಿಯು ದಿಃ21/04/2023 ರಂದು ಉದ್ದೇಶಿತ 7 ನೇ ಪ್ರತಿವಾದಿಗೆ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ. ಉದ್ದೇಶಿತ 6 ನೇ ಪ್ರತಿವಾದಿಯು 4 ನೇ ಪ್ರತಿವಾದಿಯ ಹೆಂಡತಿಯಾಗಿದ್ದು, ವಕೀಲ ವೃತ್ತಿ ಮಾಡುತ್ತಿದ್ದ ಬಗ್ಗೆ ಮಧ್ಯಂತರ ಅರ್ಜಿ ನಂ.5 ರಲ್ಲಿ ವಾದಿಯರು ನಮೂದು ಮಾಡಿದ್ದಾರೆ. ದಾವೆ ಚಾಲ್ತಿಯಲ್ಲಿದ್ದಾಗ ದಾವಾ ಐಟಂ ನಂ.5 ನ್ನು ಪರಭಾರೆ ಮಾಡುತ್ತ ಹೋದಲ್ಲಿ ವಾದಿಯರಿಗೆ ತಮ್ಮ ಭಾಗದ ಆಸ್ತಿಯನ್ನು ಪಡೆದುಕೊಳ್ಳಲು ತೊಂದರೆಯಾಗುತ್ತದೆ.

ಉದ್ದೇಶಿತ 7 ನೇ ಪ್ರತಿವಾದಿಯು ದಾವಾ ಐಟಂ ನಂ.5 ರಲ್ಲಿ ಮರಳನ್ನು ಸಂಗ್ರಹ ಮಾಡಿ, ದಾವಾ ಆಸ್ತಿಯ ಬದುವನ್ನು ಅಳಿಸಿ ಹಾಕಿ ಸಮತಟ್ಟು ಮಾಡಿರುವುದು ವಾದಿಯರು ಹಾಜರುಪಡಿಸಿದ ಭಾವಚಿತ್ರಗಳಿಂದ ಕಂಡುಬರುತ್ತದೆ. ವಾದಿಯರು ಉದ್ದೇಶಿತ 7 ನೇ ಪ್ರತಿವಾದಿಯ ವಿರುದ್ಧ ಹೊನ್ನಾಳಿ ಪೊಲೀಸಠಾಣೆಗೆ ದಿಃ07/08/2023 ರಂದು ದೂರು ಸಲ್ಲಿಸಿದ್ದು, ಹೊನ್ನಾಳಿ ಪೊಲೀಸರು ಕೂಲಂಬಿ ಗ್ರಾಮದ ಸರ್ವೆ ನಂ.217/1 ಕ್ಷೇತ್ರ 1 ಎಕರೆ 12 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಮೂಲ ದಾವಾ ನಂ.192/2012 ಚಾಲ್ತಿಯಲ್ಲಿದ್ದು, ಸದರಿ ದಾವೆ ವರ್ಗಾವಣೆಯಾಗಿ ಮೂಲ ದಾವಾ ನಂ.44/2023 ಎಂದು ನೊಂದಣಿಯಾಗಿದ್ದು, ಸದರಿ ಆಸ್ತಿಯನ್ನು ಸಾಗುವಳಿ ಮಾಡಲು ತೊಂದರೆ ಮಾಡದಂತೆ, 7 ನೇ ಉದ್ದೇಶಿತ ಪ್ರತಿವಾದಿಗೆ ಎಚ್ಚರಿಕೆ ನೀಡಿರುವುದಾಗಿ ಪೊಲೀಸ್ ಹಿಂಬರಹದಲ್ಲಿ ನಮೂದು ಮಾಡಿದ್ದಾರೆ. 7 ನೇ ಉದ್ದೇಶಿತ ಪ್ರತಿವಾದಿಯನ್ನು ವಿಚಾರಿಸಲಾಗಿ, ಪೊಲೀಸಠಾಣೆಗೆ ಹೋಗಿರುವುದಾಗಿ ಹೇಳಿದ್ದಾರೆ. ಆದ್ದರಿಂದ 7 ನೇ ಉದ್ದೇಶಿತ ಪ್ರತಿವಾದಿಗೆ ಸದರಿ ದಾವೆಯ ಬಗ್ಗೆ ದಿಃ07/08/2023 ರಿಂದ ಮಾಹಿತಿ ಇರುವುದು ಕಂಡುಬರುತ್ತದೆ. ವಾದಿಯರು ಮಧ್ಯಂತರ ಅರ್ಜಿ ನಂ.1 ರಲ್ಲಿ ಕೇಳಿದಂತೆ ಎಲ್ಲ ಉದ್ದೇಶಿತ ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದರೆ 7 ನೇ ಉದ್ದೇಶಿತ ಪ್ರತಿವಾದಿಯ ವಿರುದ್ಧ ಮಾತ್ರ ಪರಿಹಾರ ಕೇಳಿರುವುದರಿಂದ ವಾದಿಯರ ಅರ್ಜಿಯನ್ನು ಈ ಹಂತದಲ್ಲಿ ಪುರಸ್ಕರಿಸಲು 7 ನೇ ಉದ್ದೇಶಿತ ಪ್ರತಿವಾದಿಯು ದಾವೆಯಲ್ಲಿ ಸೇರ್ಪಡೆಯಾಗದೇ ಇರುವುದರಿಂದ 7 ನೇ ಉದ್ದೇಶಿತ ಪ್ರತಿವಾದಿಯು ದಾವಾ ಆಸ್ತಿಯ ಸ್ವರೂಪ ಬದಲಾಯಿಸದಂತೆ ಮತ್ತು ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ನೀಡದೇ ಹೋದಲ್ಲಿ 7 ನೇ ಉದ್ದೇಶಿತ ಪ್ರತಿವಾದಿಯು ಸಹ ಮಾರಾಟ ಮಾಡುವ ಮತ್ತು ದಾವಾ ಆಸ್ತಿಯ ಸ್ವರೂಪ ಬದಲಾಯಿಸುವ ಬಗ್ಗೆ ವಾದಿಯರು

ಹಾಜರುಪಡಿಸಿದ ದಾಖಲೆಗಳಿಂದ ಕಂಡುಬರುತ್ತದೆ. ಆದ್ದರಿಂದ ಈ ಹಂತದಲ್ಲಿ 7 ನೇ ಉದ್ದೇಶಿತ ಪ್ರತಿವಾದಿ ದಾವಾ ಆಸ್ತಿಯ ಸ್ವರೂಪವನ್ನು ಬದಲಾಯಿಸದಂತೆ ಮತ್ತು ಪರಭಾರೆ ಮಾಡದಂತೆ ತಾತ್ಕಾಲಿಕ ಪರಿಹಾರ ಮಂಜೂರು ಮಾಡುವುದು ನ್ಯಾಯಸಮ್ಮತವೆಂದು ಕಂಡುಬರುವುದರಿಂದ ಈ ಕೆಳಕಂಡಂತೆ ಮಾಡಿದಃ

## ಆದೇಶ

7 ನೇ ಉದ್ದೇಶಿತ ಪ್ರತಿವಾದಿಯು ಹೊನ್ನಾಳಿ ತಾಲ್ಲೂಕು, ಕೂಲಂಬಿ ಗ್ರಾಮದ ಸರ್ವೆ ನಂ.217 ಕ್ಷೇತ್ರ 1 ಎಕರೆ 12 ಗುಂಟೆ ಜಮೀನಿನ ಸ್ವರೂಪವನ್ನು ಬದಲಾಯಿಸದಂತೆ ಹಾಗೂ ಸದರಿ ಆಸ್ತಿಯನ್ನು ಅಡಮಾನ, ಮಾರಾಟ ಅಥವಾ ಇತರ ಯಾವುದೇ ರೀತಿಯಲ್ಲಿ ಪರಭಾರೆ ಮಾಡದಂತೆ ಯಥಾ ಸ್ಥಿತಿ ಕಾಯ್ದುಕೊಳ್ಳುವಂತೆ ನಿರ್ದೇಶಿಸಲಾಗಿದೆ.

Issue notice to proposed defendant No.5 and 6.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಹರಿಹರ.